## <u>ಸನ್ಮಾನ್ಯ ಸಾರಿಗೆ ಸಚಿವರ ಪತ್ರಿಕಾಗೋಷ್ಠಿ</u>

**ಪ್ರತಿಷ್ಠಿತ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ಗೆ ಸೇರ್ಪಡೆಗೊಂಡ ದೇಶದ ಪ್ರಪ್ರಥಮ ರಸೆ ಸಾರಿಗೆ ಸಂಸ್ಥೆ**
**ಕೆಎಸ್‌ಆರ್‌ಟಿಸಿ– ಅತೀ ಹೆಚ್ಚು ಪ್ರಶಸ್ತಿಗಳನ್ನು ಪಡೆದ ದೇಶದ ಮೊದಲ ರಸ್ತೆ ಸಾರಿಗೆ ಸಂಸ್ಥೆ**
**ಹಾಗೂ**
**ಕರ್ನಾಟಕ ರಾಜ್ಯದ ಮೊದಲ ಸರ್ಕಾರಿ ಸಂಸ್ಥೆ**

**ಕೆಎಸ್‌ಆರ್‌ಟಿಸಿ ಸಂಸ್ಥೆಯ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಸಂಸ್ಥೆಯು 2015–16 ನೇ ಸಾಲಿನಲ್ಲಿ ನಿವ್ವಳ ರೂ.114.95 ಕೋಟಿ ಲಾಭವನ್ನುಗಳಿಸಿದೆ.** ಇದರಲ್ಲಿ ಸಂಸ್ಥೆಯ ಸಿಬ್ಬಂದಿಗಳು ನಿವೃತ್ತಿ ಹೊಂದಿದ ಸಮಯದಲ್ಲಿ ಯಾವುದೇ ರೀತಿಯ ಆರ್ಥಿಕ ಮುಗ್ಗಟ್ಟನ್ನು ಎದುರಿಸಬಾರದು ಎಂಬ ಸದುದ್ದೇಶದಿಂದ **ನಿವ್ವಳ ಲಾಭದಲ್ಲಿ ರೂ.64 ಕೋಟಿಯನ್ನು ಗ್ರ್ಯಾಚುಟಿ ನಿಧಿಯಲ್ಲಿ** ಜಮಾ ಮಾಡಲಾಗಿದೆ. ಸಂಸ್ಥೆಯು 2015–16 ನೇ ಸಾಲಿನಲ್ಲಿ ನಿವ್ವಳ **ಲಾಭ ರೂ.50.95 ಕೋಟಿಯನ್ನು ಲೆಕ್ಕಪತ್ರದಲ್ಲಿ ಮಂಡಿಸಲಾಗಿದೆ.**

**ಕೆಎಸ್‌ಆರ್‌ಟಿಸಿಯು** 2014–15ರಲ್ಲಿ **ರೂ.314.73 ಕೋಟಿ** ಇದ್ದ ಸಾಲದಲ್ಲಿ **ರೂ.161.22ಕೋಟಿಯನ್ನು** ಮರುಪಾವತಿಸಲಾಗಿದ್ದು, **ರೂ.153.51 ಕೋಟಿಯಷ್ಟು** ಮಾತ್ರ ಸಾಲ ಬಾಕಿಯಿದೆ.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು ಕಳೆದ ಐದು ದಶಕಗಳಿಂದ ಭಾರತ ಸರ್ಕಾರ ಸ್ವಾಮ್ಯದ ಐಒಸಿ ಲಿಮಿಟೆಡ್‌ರವರಿಂದ ಡೀಸೆಲ್‌ನ್ನು ಖರೀದಿಸುತ್ತಿದ್ದು, ಮೊದಲ ಬಾರಿಗೆ **ಅಂದರೆ 1/07/2015** ರಿಂದ ಭಾರತ ಸರ್ಕಾರ ಸ್ವಾಮ್ಯದ ಬಿಪಿಸಿಎಲ್ ಲಿಮಿಟೆಡ್ ರವರಿಂದ ಖರೀದಿಸಲು ಪ್ರಾರಂಭಿಸಿದೆ. ಇದರೊಂದಿಗೆ ಹೊಸದಾಗಿ **ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳ 212 ಘಟಕಗಳಿಗೆ ಇಂಧನ ಅಟೋಮೇಷನ್ ಸೌಲಭ್ಯ ಹಾಗೂ ಹೊಸ** ಇಂಧನ **ಬಂಕ್**‌ಗಳನ್ನು ಉಚಿತವಾಗಿ ಪಡೆಯಲಾಗಿದೆ. ಇದರಿಂದ **ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಿಗೆ ಅಂದಾಜು ರೂ.358 ಕೋಟಿ ಮೂರು ವರ್ಷಗಳಿಗೆ** ಉಳಿತಾಯವಾಗಲಿದೆ. **ಇಂಧನ ಅಟೋಮೇಷನ್ ಸೌಲಭ್ಯವನ್ನು ಶೀಘ್ರದಲ್ಲಿಯೇ ಉದ್ಘಾಟಿಸಲಾಗುವುದು.**

- **ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ ನಗರಗಳಲ್ಲಿ ನಗರ ಸಾರಿಗೆಯನ್ನು ಪ್ರಾರಂಭಿಸಿದ ರಾಜ್ಯ ಕರ್ನಾಟಕ** ಶಿವಮೊಗ್ಗ, ಭದ್ರಾವತಿ, ಚಿಕ್ಕಬಳ್ಳಾಪುರ, ರಾಮನಗರ, ಮೈಸೂರು, ಚಾಮರಾಜನಗರ, ಚಿಕ್ಕಮಗಳೂರು, ತುಮಕೂರು, ದಾವಣಗೆರೆ, ಮಂಗಳೂರು, ಪುತ್ತೂರು, ಉಡುಪಿ, ಮಡಿಕೇರಿ, ಕೋಲಾರ, ಕೆ.ಜಿ.ಎಫ್, ಚಿತ್ರದುರ್ಗ, ಮಂಡ್ಯ ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಬಾಗಲಕೋಟೆ, ರಾಣೆಬೆನ್ನೂರು, ಗದಗ, ಬೆಟಗೇರೆ, ಕಾರವಾರ, ಕುಮಟಾ, ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ಹೊಸಪೇಟೆ, ಬಳ್ಳಾರಿ, ವಿಜಯಪುರ, ಗಂಗಾವತಿ, ಸಿಂಧನೂರು, ಸೇಡಂಗಳಲ್ಲಿ ನಗರ ಸಾರಿಗೆ ಕಾರ್ಯಾಚರಣೆಯಾಗುತ್ತಿದೆ. ಪ್ರಸ್ತುತ ರಾಜ್ಯದ **41 ನಗರಗಳಲ್ಲಿ 1793 ನಗರ ಸಾರಿಗೆ** ಬಸ್ಸುಗಳು ಕಾರ್ಯಾಚರಣೆಗೊಳ್ಳುತ್ತಿವೆ.
- **5273 ಹೊಸ ಬಸ್ಸುಗಳನ್ನು** ನಾಲ್ಕು ನಿಗಮಗಳಿಂದ ಸಾರ್ವಜನಿಕ ಸಾರಿಗೆ ಸೇವೆಗೆ ಈಗಾಗಲೇ ಸೇರ್ಪಡೆಗೊಳಿಸಲಾಗಿದೆ.
- ಪ್ರಸಕ್ತ ಸಾಲಿನಲ್ಲಿ **2500 ಬಸ್ಸುಗಳನ್ನು ಗ್ರಾಮಾಂತರ ಪ್ರದೇಶಗಳಿಗೆ** ಸೇರ್ಪಡೆಗೊಳಿಸಲಾಗುವುದು. ಮೇ 2017 ರ ಅಂತ್ಯದೊಳಗೆ **5500** ಬಸ್ಸುಗಳನ್ನು ನಾಲ್ಕು ಸಾರಿಗೆ ನಿಗಮಗಳಿಂದ ಸೇರ್ಪಡೆಗೊಳಿಸಲಾಗುವುದು.
- ನಾಲ್ಕು ಸಾರಿಗೆ ನಿಗಮಗಳು ಸೇರಿ ಕಳೆದ 3 ವರ್ಷದಲ್ಲಿ 25454 ಸಿಬ್ಬಂದಿಗಳ ನೇಮಕಾತಿ ಮಾಡಲಾಗಿದೆ.

- 371 ಜೆ ಮೀಸಲಾತಿಯಡಿಯಲ್ಲಿ 3826 ಸಿಬ್ಬಂದಿಗಳ ನೇಮಕಾತಿ ಮಾಡಲಾಗಿದೆ.
- ಈಗಾಗಲೇ ಸ್ವೈಪಿಂಗ್ ಮೆಷಿನ್‌ಗಳನ್ನು ಕೆಎಸ್‌ಆರ್‌ಟಿಸಿಯ 110 ಕೌಟಂರ್‌ಗಳಲ್ಲಿ ಅಳವಡಿಸಲಾಗಿದೆ.
- ಕೆಎಸ್‌ಆರ್‌ಟಿಸಿ / ವಾಯವ್ಯ ರಸ್ತೆ ಸಾರಿಗೆ ಸಂಸ್ಥೆ/ಈಶಾನ್ಯ ರಸ್ತೆ ಸಾರಿಗೆ ಸಂಸ್ಥೆ ವ್ಯಾಪ್ತಿಯ ಎಲ್ಲಾ **ಬಸ್ಸುಗಳಲ್ಲಿ ಮತ್ತು ಬಸ್ ನಿಲ್ದಾಣಗಳಲ್ಲಿ ಉಚಿತ ವೈಫೈ ಸೇವೆಯನ್ನು** ನೀಡಲಾಗುವುದು.

  ಕೆಎಸ್‌ಆರ್‌ಟಿಸಿ– 156 ಬಸ್ ನಿಲ್ದಾಣ, 8317 ಬಸ್ಸುಗಳು
  ವಾಯವ್ಯ ರಸ್ತೆ ಸಾರಿಗೆ ಸಂಸ್ಥೆ–166 ಬಸ್ ನಿಲ್ದಾಣ, 4785 ಬಸ್ಸುಗಳು
  ಈಶಾನ್ಯ ರಸ್ತೆ ಸಾರಿಗೆ ಸಂಸ್ಥೆ –136 ಬಸ್ ನಿಲ್ದಾಣ, 4346 ಬಸ್ಸುಗಳು

  ಈಗಾಗಲೇ ಕೆಎಸ್‌ಆರ್‌ಟಿಸಿಯ ಪ್ರಮುಖ 24 ಬಸ್ ನಿಲ್ದಾಣಗಳಲ್ಲಿ ಉಚಿತ ವೈಫೈ ಸೇವೆಯನ್ನು ನೀಡಲಾಗಿದೆ. ಈ ಸೇವೆಯನ್ನು 35 ಲಕ್ಷ ಪ್ರಯಾಣಿಕರು ಬಳಸಿಕೊಂಡಿರುತ್ತಾರೆ.

- ಮಹಿಳಾ ಪ್ರಯಾಣಿಕರ ಸುರಕ್ಷತೆಯ ದೃಷ್ಟಿಯಿಂದ **ಕೆಎಸ್‌ಆರ್‌ಟಿಸಿ ವ್ಯಾಪ್ತಿಯಲ್ಲಿ** ಸಂಸ್ಥೆಯ ಹಣದಿಂದಲೇ ಘಟಕ/ವಿಭಾಗೀಯ ಕಾರ್ಯಗಾರ ಹಾಗೂ **90 ಬಸ್ ನಿಲ್ದಾಣಗಳಲ್ಲಿ ರೂ 14.95 ಕೋಟಿ ವೆಚ್ಚದಲ್ಲಿ ಸಿಸಿಟಿವಿಯನ್ನು** ಅಳವಡಿಸಲಾಗುತ್ತಿದೆ.
- **ಡಿಜಿಟಲ್ ಕೆಎಸ್‌ಆರ್‌ಟಿಸಿ** ಕಾರ್ಯಕ್ರಮದಡಿ ಇ–ಟೋಲ್ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತಿದೆ. ಪ್ರತಿ ತಿಂಗಳು ಸರಾಸರಿ ರೂ 5 ರಿಂದ 6 ಕೋಟಿಯಷ್ಟು ಟೋಲ್ ಫೀ ಯನ್ನು ಕೆಎಸ್‌ಆರ್‌ಟಿಸಿ ಭರಿಸುತ್ತಿದೆ. ಇ–ಟೋಲ್ ವ್ಯವಸ್ಥೆಯ ಅನುಷ್ಠಾನದಿಂದ 10% ರಿಂದ 20% ರವರೆಗೆ ರಿಯಾಯಿತಿ ದೊರೆಯಲಿದೆ. ಪ್ರಯಾಣದ ಸಮಯ ಮತ್ತು ಚಿಲ್ಲರೆ ಸಮಸ್ಯೆ ಬಗೆಹರಿಯಲಿದೆ.

## ಪ್ರಶಸ್ತಿ/ಪುರಸ್ಕಾರಗಳು

- **ಕೆಎಸ್‌ಆರ್‌ಟಿಸಿಗೆ ಭಾರತ ಸರ್ಕಾರದ ಅತ್ಯುನ್ನತ ಮಾಹಿತಿ ತಂತ್ರಜ್ಞಾನದ ರಾಷ್ಟ್ರೀಯ ಪ್ರಶಸ್ತಿಯಾದ "ರಾಷ್ಟ್ರೀಯ e- Governance 2016–17" ನೇ ಸಾಲಿನ ಸ್ವರ್ಣ ಪ್ರಶಸ್ತಿ ಪ್ರದಾನ**
  - ರಾಷ್ಟ್ರೀಯ e- Governance ಪ್ರಶಸ್ತಿ ಸ್ಥಾಪಿತಗೊಂಡ ವರ್ಷದಿಂದ ಈವರೆಗೂ (2009–10 ರಲ್ಲಿ ಕೆಎಸ್‌ಆರ್‌ಟಿಸಿ ಬೆಳ್ಳಿ ಪ್ರಶಸ್ತಿಯನ್ನು ಪಡೆದಿರುವುದನ್ನು ಹೊರತುಪಡಿಸಿ) ರಾಷ್ಟ್ರೀಯ e-Governance ಸ್ವರ್ಣ ಪ್ರಶಸ್ತಿಯನ್ನು ಪಡೆದಿರುವ ಪ್ರಪ್ರಥಮ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕೆಎಸ್‌ಆರ್‌ಟಿಸಿಯಾಗಿದೆ.
  - ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ, ಭಾರತ ಸರ್ಕಾರವು ರಾಷ್ಟ್ರೀಯ e-Governance ಪ್ರಶಸ್ತಿಯನ್ನು ಪ್ರತಿಷ್ಠಾಪಿಸಿದ್ದು, ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಸಂಘ/ಸಂಸ್ಥೆಗಳು ಸಲ್ಲಿಸಿರುವ ಸೇವೆಯನ್ನು ಪ್ರೋತ್ಸಾಹಿಸಿ ಗೌರವಿಸುವುದಾಗಿದೆ. ಪ್ರತಿವರ್ಷವೂ 12 ವಿವಿಧ ವರ್ಗಗಳಲ್ಲಿ ರಾಷ್ಟ್ರೀಯ e- Governance ಪ್ರಶಸ್ತಿಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ, ಭಾರತ ಸರ್ಕಾರವು ನೀಡುತ್ತದೆ. ಪ್ರಸಕ್ತ ವರ್ಷದಲ್ಲಿ 9 ವರ್ಗಗಳಲ್ಲಿ ಮಾತ್ರ ಸ್ವರ್ಣ ಪ್ರಶಸ್ತಿಯನ್ನು ನೀಡಲಾಗಿದೆ.

- ಕೆಎಸ್ಆರ್‌ಟಿಸಿಗೆ ಇದುವರೆಗೂ ಲಭಿಸಿರುವ ಪ್ರಶಸ್ತಿಗಳು 165 ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪ್ರಶಸ್ತಿ/ಪುರಸ್ಕಾರಗಳು ಲಭಿಸಿರುತ್ತವೆ. ಮೇ 2013 ರಿಂದ ಜನವರಿ 2017 ಒಟ್ಟು 45 ತಿಂಗಳು – 102 ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪ್ರಶಸ್ತಿ/ಪುರಸ್ಕಾರಗಳು ಲಭಿಸಿರುತ್ತದೆ.

**ಮೂಲಭೂತ ಸೌಕರ್ಯಗಳು:**

- ಹೊಸದುರ್ಗದಲ್ಲಿ ನೂತನ ಬಸ್ ಘಟಕ ನಿರ್ಮಿಸಿ ಕಾರ್ಯಾರಂಭಿಸಲಾಗಿದೆ. ಪಿರಿಯಾಪಟ್ಟಣ, ಸುಳ್ಯ, ಮಧುಗಿರಿ ಮತ್ತು ಬೇಲೂರಿನಲ್ಲಿ ಘಟಕ ನಿರ್ಮಾಣಕಾರ್ಯ ಪ್ರಗತಿಯಲ್ಲಿದ್ದು 2017ರಲ್ಲಿ ಪೂರ್ಣಗೊಳ್ಳಲಿದೆ.
- ಬಿಳಿಕೆರೆ, ಕಟ್ಟೆಮರಳವಾಡಿ, ಕಳಸಾಪುರ, ಚಳ್ಳಕೆರೆ, ಬಿ.ಸಿ.ರಸ್ತೆ ಮತ್ತು ಮೂಡಿಗೆರೆಯಲ್ಲಿ **6 ನೂತನ ಬಸ್ ನಿಲ್ದಾಣಗಳನ್ನು** ಉದ್ಘಾಟಿಸಲಾಗಿದೆ. ಹುಲಿಯೂರುದುರ್ಗದಲ್ಲಿ ಬಸ್ ನಿಲ್ದಾಣ ನಿರ್ಮಾಣ ಕೆಲಸವು ಪೂರ್ಣಗೊಂಡಿದ್ದು, ಬಸ್ ನಿಲ್ದಾಣವು ಕಾರ್ಯಾರಂಭಿಸಿದೆ.
- ಸಮಾಜ ಕಲ್ಯಾಣ ಇಲಾಖೆಯ ವಿಶೇಷ ಘಟಕ ಯೋಜನೆಯಡಿ ರೂ.**30.84** ಕೋಟಿ ಮೊತ್ತದ ಅನುದಾನವನ್ನು ನಿಗಮಕ್ಕೆ ವರ್ಗಾಯಿಸಿದ್ದು ಸದರಿ ಮೊತ್ತವನ್ನು ಮಾಲೂರು, ಚಿಕ್ಕಮಗಳೂರು ಮತ್ತು ಮಳವಳ್ಳಿ ಪಟ್ಟಣಗಳಲ್ಲಿ ಚಾಲಕರ ತರಬೇತಿ ಕೇಂದ್ರ ಮತ್ತು ಶ್ರೀನಿವಾಸಪುರ, ಚಿಕ್ಕಮಗಳೂರು ಮತ್ತು ಮಳವಳ್ಳಿ ಪಟ್ಟಣಗಳಲ್ಲಿ ತಾಂತ್ರಿಕ ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು ನಿರ್ಮಿಸಲು ವ್ಯಯಿಸಲಾಗುತ್ತಿದೆ. ಚಿಕ್ಕಮಗಳೂರು ಮತ್ತು ಮಳವಳ್ಳಿಯಲ್ಲಿನ ತರಬೇತಿ ಕೇಂದ್ರಗಳನ್ನು ಉದ್ಘಾಟಿಸಲಾಗಿದ್ದು, ಕಾಯಾಚರಣೆಯಲ್ಲಿರುತ್ತವೆ ಹೊಳಲಕೆರೆಯಲ್ಲಿ ನೂತನ ಚಾಲನಾ ತರಬೇತಿ ಕೇಂದ್ರದ ಟೆಂಡರ್ ಕರೆಯಲಾಗಿದೆ.

**ಜೆ.ಎನ್.ಎನ್.ಯೂ.ಆರ್.ಎಂ.ನ ಯೋಜನೆ–2/ಅಮೃತ್**

- ನಗರಾಭಿವೃದ್ಧಿ ಸಚಿವಾಲಯ, ಕೇಂದ್ರ ಸರ್ಕಾರವು ಜೆ.ಎನ್.ಎನ್.ಯು.ಆರ್.ಎಂ.–2ರ ಯೋಜನೆ ಅಡಿಯಲ್ಲಿ ಕ.ರಾ.ರ.ಸಾ.ನಿಗಮಕ್ಕೆ 487 ನಗರ ಸಾರಿಗೆ ಬಸ್ಸುಗಳನ್ನು ಮಂಜೂರು ಮಾಡಿರುತ್ತದೆ. ಅದರಂತೆ ಈಗಾಗಲೇ 354 ನಗರ ಸಾರಿಗೆ ವಾಹನಗಳನ್ನು ಸೇರ್ಪಡೆಗೊಳಿಸಲಾಗಿದೆ. 133 ಬಸ್ಸುಗಳನ್ನು ಮುಂದಿನ ಒಂದು ತಿಂಗಳಿನಲ್ಲಿ ಸೇರ್ಪಡೆಗೊಳಿಸಲಾಗುವುದು.

**ನಿಗಮವು 2017–18ನೇ ಸಾಲಿನಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಯೋಜನೆಗಳು:**

- **11 ಹೊಸ ಬಸ್ ನಿಲ್ದಾಣ** – ನಂಜನಗೂಡು, ಕನಕಪುರ, ಚುಂಚನಕಟ್ಟೆ, ಕೊಪ್ಪ, ಹಾಸನ, ಚಿಕ್ಕಬಳ್ಳಾಪುರ, ಅರೆಹಳ್ಳಿ, ಹೊಸದುರ್ಗ, ಹನೂರು, ಕೇರಳಾಪುರ ಮತ್ತು ಚಂದ್ರಶೇಕರಪುರ ಈ ಸ್ಥಳಗಳಲ್ಲಿ ಹೊಸ ಬಸ್ ನಿಲ್ದಾಣ ನಿರ್ಮಾಣಕಾಮಗಾರಿ ಪ್ರಗತಿಯಲ್ಲಿದೆ.
- ರಾಜ್ಯ ಸರ್ಕಾರದ ಡಲ್ಟ್ ಯೋಜನೆ ಅಡಿಯಲ್ಲಿ ಪುತ್ತೂರು ಮತ್ತು ಮಡಿಕೇರಿ ನಗರಗಳಲ್ಲಿ ನಗರ ಸಾರಿಗೆ ವಾಹನಗಳನ್ನು ಕಾರ್ಯಾಚರಣೆ ಮಾಡಲು ಯೋಜಿಸಲಾಗಿದೆ.
- ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ತಿರುಪತಿ, ಕೊಯಂಬತ್ತೂರು ಮತ್ತು ಸೇಲಂ ಸ್ಥಳಗಳಿಗೆ Fly bus ಆಚರಣೆ ಮಾಡಲು ಯೋಜಿಸಲಾಗಿದೆ.
- 83 ಮೇಲ್ವಿಚಾರಕ, 1116 ಮೇಲ್ವಿಚಾರಕೇತರ ಹುದ್ದೆಗಳನ್ನು ನೇಮಕಾತಿ ಮಾಡಲು ಯೋಜಿಸಲಾಗಿದೆ.
- ಪಿರಿಯಾಪಟ್ಟಣ, ಸುಳ್ಯ ಮತ್ತು ಬೇಲೂರಿನಲ್ಲಿ ಒಟ್ಟು **3 ನೂತನ ಬಸ್ ಘಟಕಗಳ** ನಿರ್ಮಾಣ ಕೆಲಸವನ್ನು ಪೂರ್ಣಗೊಳಿಸಲಾಗುವುದಲ್ಲದೇ ಹಾಲಿ ಕಾರ್ಯಾಚರಣೆಯಲ್ಲಿರುವ ಬಸ್ ಘಟಕಗಳನ್ನು ಮೇಲ್ದರ್ಜೆಗೇರಿಸಲಾಗುವುದು.

- ನಂಜನಗೂಡು, ಕನಕಪುರ, ಹಾಸನ (ಟಿ.ಟಿ.ಎಂ.ಸಿ), ಹನೂರು, ಕೊಪ್ಪ, ಆಲೂರು ಸಿದ್ದಾಪುರ, ಚಿಕ್ಕಬಳ್ಳಾಪುರ, ಅರೆಹಳ್ಳಿ, ಚುಂಚನಕಟ್ಟೆ, ಕೋಡಿಹಳ್ಳಿ, ಬೆಸಗರಹಳ್ಳಿ, ಸುತ್ತೂರು, ಹಿರಿಸಾವೆ ಮತ್ತು ಕೆ.ಎಂ.ದೊಡ್ಡಿಯಲ್ಲಿ ಒಟ್ಟು **15 ನೂತನ ಬಸ್ ನಿಲ್ದಾಣಗಳ** ನಿರ್ಮಾಣ ಕೆಲಸವನ್ನು ಪೂರ್ಣಗೊಳಿಸಲಾಗುವುದಲ್ಲದೇ ಹಾಲಿ ಕಾರ್ಯಾಚರಣೆಯಲ್ಲಿರುವ ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲಾಗುವುದು.
- ಜೆ.ಎನ್.ಎನ್.ಯು.ಆರ್.ಎಂ. (ಯು.ಐ.ಡಿ.ಎಸ್.ಎಸ್.ಎಂ.ಟಿ) ಯೋಜನೆಯಡಿಯಲ್ಲಿ ಕೋಲಾರ, ಕೆ.ಜಿ.ಎಫ್., ಉಡುಪಿ, ಶಿವಮೊಗ್ಗ ಪಟ್ಟಣ/ನಗರಗಳಲ್ಲಿ ನಗರ ಸಾರಿಗೆ ಬಸ್ ಘಟಕ ನಿರ್ಮಾಣ ಕಾಮಗಾರಿ ಕೆಲಸಗಳನ್ನು ಪೂರ್ಣಗೊಳಿಸಲಾಗುವುದು.
- ನಗರ ಭೂ ಸಾರಿಗೆ ನಿರ್ದೇಶನಾಲಯದ ಅನುದಾನದಡಿಯಲ್ಲಿ ಹರಿಹರ, ಕೊಳ್ಳೆಗಾಲ, ಉಡುಪಿ, ದೊಡ್ಡಬಳ್ಳಾಪುರ ಮತ್ತು ಕೋಲಾರದಲ್ಲಿ ನಗರ ಸಾರಿಗೆಗಾಗಿ ಬಸ್ ನಿಲ್ದಾಣಗಳ ನಿರ್ಮಾಣ ಕೆಲಸಗಳನ್ನು ಪೂರ್ಣಗೊಳಿಸಲಾಗುವುದು.
- ನಿಗಮದ ನೌಕರರಿಗಾಗಿ ಮಡಿಕೇರಿ, ಹಾಸನ, ಚಿಕ್ಕಮಗಳೂರು, ಸಕಲೇಶಪುರ, ಚಿತ್ರದುರ್ಗ, ತಿಪಟೂರು, ಪುತ್ತೂರು, ಸುಳ್ಯ, ಧರ್ಮಸ್ಥಳ, ಮೂಡಿಗೆರೆ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರಿನ ಶಾಂತಿನಗರದಲ್ಲಿ ವಸತಿಗೃಹಗಳನ್ನು ನಿರ್ಮಿಸಲಾಗುವುದು.




***************